


International Journal of Kannada Research
www.kannadajournal.com

ISSN: 2454–5813
IJKR 2023; 9(2): 156-159
© 2023 IJKR
www.kannadajournal.com
Received: 08-02-2023
Accepted: 13-03-2023

**ಡಾ. ಕೆಂಗಲ್ ಮೂರ್ತಿ.ಕೆ.ಜಿ**
ಸಹಾಯಕ ಪ್ರಾಧ್ಯಾಪಕರು,
ಕನ್ನಡ ವಿಭಾಗ,
ಸಿ.ಎಂ.ಆರ್ ವಿಶ್ವವಿದ್ಯಾಲಯ,
ಕರ್ನಾಟಕ, ಭಾರತ

**Corresponding Author:**
**ಡಾ. ಕೆಂಗಲ್ ಮೂರ್ತಿ.ಕೆ.ಜಿ**
ಸಹಾಯಕ ಪ್ರಾಧ್ಯಾಪಕರು,
ಕನ್ನಡ ವಿಭಾಗ,
ಸಿ.ಎಂ.ಆರ್ ವಿಶ್ವವಿದ್ಯಾಲಯ,
ಕರ್ನಾಟಕ, ಭಾರತ

# ಬಸವಣ್ಣನವರ ಕೆಲವು ಆಯ್ದ ವಚನಗಳ ವಿಶ್ಲೇಷಣೆ

**ಡಾ. ಕೆಂಗಲ್ ಮೂರ್ತಿ.ಕೆ.ಜಿ**

**ಪರಿಚಯ**

ವಚನಗಳು ಕನ್ನಡ ಸಾಹಿತ್ಯದ ಪ್ರಮುಖ ಪ್ರಕಾರಗಳಲ್ಲಿ ಒಂದು. 11ನೇ ಶತಮಾನದ ಉತ್ತರಾರ್ಧದಲ್ಲಿ ಉದಯಿಸಿ 12ನೇ ಶತಮಾನದ ಕಡೆಯವರೆಗೂ ಜನ ಸಾಮಾನ್ಯರ ಆಂದೋಲನದ ಭಾಗವಾಗಿ ಬೆಳೆದು ಬಂದ ಸಾಹಿತ್ಯವೇ ವಚನಗಳಾಗಿವೆ.

ವಚನಗಳು ಮನುಷ್ಯನ ಜೀವನದ ಹಲವಾರು ಅಂಶಗಳನ್ನು ಕುರಿತು ಚಿತ್ರಿಸುತ್ತವೆ. ಉತ್ತಮ ಬದುಕಿಗೆ ಅಗತ್ಯವಾದ ಮೌಲ್ಯಗಳನ್ನು ಸಾರುತ್ತವೆ. ಇವು ನೋಡಲು ಕಿರಿದಾಗಿದ್ದರೂ ಒಳಾರ್ಥದಲ್ಲಿ ಹಿರಿಮೆಯನ್ನು ಹೊಂದಿವೆ. ಈ ಹಿನ್ನಲೆಯಿಂದಲೇ ಸಂಶೋಧಕರಾದ ಡಾ. ಎಂ.ಚಿದಾನಂದ ಮೂರ್ತಿರವರು ವಚನಗಳನ್ನು ಕನ್ನಡ ಸಾಹಿತ್ಯದ ಪನಿಷತ್ತುಗಳು ಎಂದು ಉಲ್ಲೇಖಿಸಿದ್ದಾರೆ.

ವಚನ ಸಾಹಿತ್ಯದಲ್ಲಿ ಹಲವಾರು ವಚನಕಾರರು ಮತ್ತು ವಚನಕಾರ್ತಿಯರು ತಮ್ಮದೇ ಆದಂತಹ ಕೊಡುಗೆಯನ್ನು ನೀಡಿದ್ದಾರೆ. ಅವರುಗಳಲ್ಲಿ ಕೆಲವರನ್ನು ಹೆಸರಿಸುವುದಾದರೆ ಜೇಡರ ದಾಸಿಮಯ್ಯ, ಅಲ್ಲಮ ಪ್ರಭು, ಬಸವಣ್ಣ, ಮಡಿವಾಳ ಮಾಚಯ್ಯ, ಅಂಬಿಗರ ಚೌಡಯ್ಯ, ಅಕ್ಕಮಹಾದೇವಿ, ಆಯ್ದಕ್ಕಿ ಲಕ್ಕಮ್ಮ – ಹೀಗೆ ಹಲವಾರು ಶರಣ-ಶರಣೆಯರು ತಮ್ಮ ಅನುಭಾವದ ಹಿನ್ನೆಲೆಯಲ್ಲಿ ಹಲವು ವಚನಗಳನ್ನು ರಚಿಸಿದ್ದಾರೆ. ಇವರು ತಮ್ಮ ಇಷ್ಟ ದೈವದ ಆರಾಧನೆಯೊಂದಿಗೆ ತಮ್ಮದೇ ಆದ ಅಂಕಿತ ನಾಮದಲ್ಲಿ ವಚನಗಳನ್ನು ರಚಿಸಿರುವುದನ್ನು ಕಾಣಬಹುದಾಗಿದೆ.

ಬಸವಣ್ಣ:- ವಚನ ಸಾಹಿತ್ಯದಲ್ಲಿ ಕಂಡು ಬರುವ ಪ್ರಮುಖರಲ್ಲಿ ಬಸವಣ್ಣನವರು ಅಗ್ರಗಣ್ಯರಾಗಿದ್ದಾರೆ. ಇವರು ಬಿಜಾಪುರ ಜಿಲ್ಲೆಯ ಭಾಗೇವಾಡಿ ಎಂಬ ಗ್ರಾಮದಲ್ಲಿ ಮಾದರಸ ಮತ್ತು ಮಾದಲಾಂಬಿಕೆಯ ಮಗನಾಗಿ 1134ರಲ್ಲಿ ಜನಿಸಿದರು.

ಬಸವಣ್ಣ ಭಾರತದ 12ನೇ ಶತಮಾನದ ಒಬ್ಬ ಪ್ರಮುಖ ಸಮಾಜ ಸುಧಾರಕರಾಗಿದ್ದಾರೆ. ಇವರು ಕಳಚೂರಿ ಅರಸ ಬಿಜ್ಜಳನ ಆಸ್ಥಾನದಲ್ಲಿ ಮಂತ್ರಿಯಾಗಿದ್ದು, ಶಿವ ಕೇಂದ್ರಿತ ಭಕ್ತಿ ಚಳುವಳಿಯಲ್ಲಿ ಕನ್ನಡ

ಕವಿಯಾಗಿದ್ದರು.
ಬಸವಣ್ಣನವರು ತಮ್ಮ ವಚನಗಳ ಮೂಲಕ ಸಾಮಾಜಿಕ ಜಾಗೃತಿಯನ್ನು ಮೂಡಿಸಿದವರು. ಸಾಮಾಜಿಕ ತಾರತಮ್ಯ ಮೂಢನಂಬಿಕೆಗಳನ್ನು ನಿರಾಕರಿಸಿದವರು. ಜೊತೆಗೆ ಅನುಭವ ಮಂಟಪವನ್ನು ಸ್ಥಾಪಿಸಿದವರಾಗಿದ್ದಾರೆ. ಹಾಗಾಗಿ ಬಸವಣ್ಣನವರ ಕಾಲವನ್ನು “ಸಂಕ್ರಮಣ ಯುಗ” ಎಂದು ಕರೆಯುತ್ತಾರೆ.
ಬಸವಣ್ಣನವರು “ಕೂಡಲಸಂಗಮದೇವ” ಎಂಬ ಅಂಕಿತವನ್ನು ತಮ್ಮ ವಚನಗಳಲ್ಲಿ ಬಳಸುತ್ತಾ ಮನುಷ್ಯನ ಬದುಕನ್ನು ಹತ್ತು ಹಲವು ಮುಖಗಳಲ್ಲಿ ವಿಶ್ಲೇಷಿಸುತ್ತಾರೆ. ಹಾಗಾಗಿ ಪ್ರಸ್ತುತ ಲೇಖನದಲ್ಲಿ ಬಸವಣ್ಣನವರ ಕೆಲವು ವಚನಗಳನ್ನು ಆಯ್ದು ಅವುಗಳನ್ನು ಚರ್ಚಿಸಲಾಗಿದೆ.
ವಚನ-1

ಏನು ಬಂದಿರಿ, ಹದುಳವಿದ್ದಿರೆ? ಎಂದರೆ
ನಿಮ್ಮ ಮೈಸಿರಿ ಹಾರಿಹೋಹುದೆ?
ಕುಳ್ಳಿರೆಂದರೆ ನೆಲ ಕುಳಿಹೋಹುದೆ?
ಒಡನೆ ನುಡಿದರೆ ಶಿರ-ಹೊಟ್ಟೆಯೊಡೆವುದೆ?
ಕೊಡಲಿಲ್ಲದಿದ್ದರೊಂದು ಗುಣವಿಲ್ಲದಿರ್ದಡೆ
ಕೆಡಹಿ ಮೂಗ ಕೊಯ್ಯದೆ ಮಾಣಬನೆ,
ಕೂಡಲಸಂಗಮದೇವನು?

ವಚನಗಳು ಮನುಕುಲದ ಹಲವಾರು ಅಂಶಗಳನ್ನು ಕುರಿತು ಚರ್ಚಿಸುತ್ತವೆ. ಪ್ರಧಾನವಾಗಿ ಮನುಷ್ಯನಲ್ಲಿ ಗುಣಗಳಿರಬೇಕು. ಮಾನವನ ನಡೆ-ನುಡಿಯೇ ಅವನ ವ್ಯಕ್ತಿತ್ವವನ್ನು ಸೂಚಿಸುವಂತಹವುಗಳು ಎಂಬ ಅರ್ಥದಲ್ಲಿ ಮೇಲಿನ ವಚನವು ಮೂಡಿಬಂದಿದೆ.
ವಚನ 1ರಲ್ಲಿ ಏನು ಬಂದಿರಿ ಕ್ಷೇಮವಾಗಿದ್ದೀರಾ? ಎಂದು ಕೇಳಿದರೆ ನಿಮ್ಮಲ್ಲಿ ಇರುವ ಸಂಪತ್ತು ಕಳೆದು ಹೋಗುವುದೇ? ಕುಳಿತುಕೊಳ್ಳಿ ಎಂದರೆ ಅವರು ಕುಳಿತ ಸ್ಥಳ ಕುಳಿ(ಗುಂಡಿ) ಬೀಳುವುದೇ? ನೀವು ಅವರಿಗೆ ಯಾವುದೇ ರೀತಿಯ ಭೌತಿಕ ವಸ್ತುಗಳನ್ನು ಕೊಡದಿದ್ದರೂ ಯಾವುದೇ ರೀತಿಯ ಸಮಸ್ಯೆ ಇಲ್ಲ ಆದರೆ ನಿಮ್ಮ ಮನಸ್ಸಿನಲ್ಲಿ ಉತ್ತಮ ಗುಣಗಳು ಇಲ್ಲದಿದ್ದರೆ ಆ ದೈವದ ಕೋಪಕ್ಕೆ ತುತ್ತಾಗಿ ಶಿಕ್ಷೆಯನ್ನು ಅನುಭವಿಸುತ್ತೀರಾ ಎಂಬುದು ಬಸವಣ್ಣನವರ ವಚನದ ಸಾರವಾಗಿದೆ.
ವಚನ-2

ನುಡಿದರೆ ಮುತ್ತಿನ ಹಾರದಂತಿರಬೇಕು
ನುಡಿದರೆ ಮಾಣಿಕ್ಯದ ದೀಪ್ತಿಯಂತಿರಬೇಕು
ನುಡಿದರೆ ಸ್ಫಟಿಕದ ದೀಪ್ತಿಯಂತಿರಬೇಕು
ನುಡಿದರೆ ಲಿಂಗ ಮೆಚ್ಚಿ ಅಹುದಹುದೆನ ಬೇಕು
ನುಡಿಯೊಳಗಾಗಿ ನಡೆಯದಿದ್ದರೆ
ಕೂಡಲಸಂಗಮದೇವನೆಂತೊಲಿವನಯ್ಯಾ?

ಎರಡನೇ ವಚನವು ಮನುಷ್ಯರಾಡುವ ಮಾತುಗಳು ಅರ್ಥಬದ್ಧವಾಗಿ ಸ್ಪಷ್ಟವಾಗಿ ಇರಬೇಕು ಎಂಬುದನ್ನು ವಿವಿಧ ನಿದರ್ಶನಗಳ ಮೂಲಕ ವಿವರಿಸುತ್ತಾರೆ. ನುಡಿದರೆ (ಮಾತನಾಡಿದರೆ) ಮುತ್ತಿನ ಹಾರದಂತೆ ಕ್ರಮಬದ್ಧವಾಗಿರಬೇಕು, ನುಡಿದರೆ ವಜ್ರದ ಬೆಳಕಿನಂತೆ ಪ್ರಕಾಶಮಾನವಾಗಿರಬೇಕು, ನುಡಿದರೆ ಪಾರದರ್ಶಕ ಸ್ಫಟಿಕದಿಂದ ಮಾಡಿದಂತಹ ಆಯುಧದಂತೆ ಹರಿತವಾಗಿರಬೇಕು, ನುಡಿದರೆ ಜಡರೂಪದಲ್ಲಿ ಇರುವ ಲಿಂಗವೂ ಸಹ ಒಪ್ಪಿಕೊಳ್ಳುವಂತಿರಬೇಕು. ಇದರ ಬದಲಾಗಿ ನುಡಿದಂತೆ ನಡೆಯದಿದ್ದರೆ ಆ ದೈವನಾದ ಕೂಡಲ ಸಂಗಮ ದೇವರ ಕೃಪೆಗೆ ನೀವು ಪಾತ್ರರಾಗುವುದಿಲ್ಲ ಎಂದು ಹೇಳುತ್ತಾ ಈ ಮೇಲಿನ ಎರಡನೇ ವಚನವು ಮಾತಿನ ಮಹತ್ವವನ್ನು ಕುರಿತು ವಿವರಿಸುತ್ತದೆ.
ವಚನ-3

ನೀರ ಕಂಡಲ್ಲಿ ಮುಳುಗುವರಯ್ಯಾ
ಮರನ ಕಂಡಲ್ಲಿ ಸುತ್ತುವರಯ್ಯಾ
ಬತ್ತುವ ಜಲವನೊಣಗುವ ಮರನ
ಮೆಚ್ಚಿದವರು ನಿಮ್ಮನೆತ್ತಬಲ್ಲರು
ಕೂಡಲಸಂಗಮದೇವಾ

ಮೂರನೇ ವಚನವು ಡಾಂಬಿಕ ಭಕ್ತಿಯನ್ನು ಕುರಿತು ವಿವರಿಸುತ್ತದೆ. ತೋರ್ಪಡಿಕೆಯ ಭಕ್ತರು ನೀರನ್ನು(ಕಲ್ಯಾಣಿಗಳು ಮತ್ತು ನದಿಗಳು) ಕಂಡರೆ ಸಾಕು ಭಕ್ತಿಯ ಹೆಸರಿನಲ್ಲಿ ಮುಳುಗಿ ಸ್ನಾನ ಮಾಡುತ್ತಾರೆ. ಕೆಲವು ಮರಗಳನ್ನು (ಬೇವಿನ ಮರ, ಅರಳಿ ಮರ, ಆಲದ ಮರ, ಬಿಲ್ವಪತ್ರೆ ಮರ, ಬನ್ನಿ ಮರ... ಇತ್ಯಾದಿ) ಭಕ್ತಿಯ ಹೆಸರಿನಲ್ಲಿ ಪ್ರದಕ್ಷಿಣೆ ಹಾಕುತ್ತಾರೆ. ಆದರೆ ನೀರು ಮತ್ತು ಮರಗಳು ಕಾಲಾನಂತರದಲ್ಲಿ ನೀರು ಬತ್ತಿ ಹೋಗುತ್ತದೆ, ಮರ ಒಣಗಿ ಹೋಗುತ್ತದೆ. ಅಂದರೆ ನಾಶವಾಗುತ್ತವೆ. ಇಂತಹ ಅಶಾಶ್ವತವಾದಂತಹ ನೀರು ಮತ್ತು ಮರಗಳನ್ನು ಭಕ್ತಿಯ ಹೆಸರಿನಲ್ಲಿ ನಂಬಿಕೊಂಡಿರುವಂತಹ ಭಕ್ತರು ನಿಜ ದೈವನಾದ; ಶಾಶ್ವತ ಸ್ವರೂಪಿಯಾದ ಕೂಡಲಸಂಗನ ದೇವರನ್ನು ಅರಿಯಲು ಹೇಗೆ ಸಾಧ್ಯ ಎಂದು ಬಸವಣ್ಣನವರು ಪ್ರಶ್ನಿಸಿದ್ದಾರೆ.
ವಚನ-4

ಹಾವು ತಿಂದವರ ನುಡಿಸಬಹುದು
ಗರ ಹೊಡೆದವರ ನುಡಿಸಬಹುದು

ಸಿರಿಗರ ಹೊಡೆದವರ ನುಡಿಸಲು ಬಾರದು ನೋಡಯ್ಯ
ಬಡತನವೆಂಬ ಮಂತ್ರವಾದಿ ಹೋಗಲು ಒಡನೆ ನುಡಿವರು
ಕೂಡಲಸಂಗಮದೇವಾ

ನಾಲ್ಕನೇ ವಚನವು ಅಧಿಕಾರ ಮತ್ತು ಸಂಪತ್ತು ಮನುಷ್ಯ ಮನುಷ್ಯತ್ವವನ್ನು ಬದಲಿಸುತ್ತದೆ ಎಂಬುದನ್ನು ವಿವರಿಸುತ್ತದೆ.

ಹಾವಿನ ಕಡಿತದಿಂದ ಸಾವಿನ ದವಡೆಯಲ್ಲಿ ಒದ್ದಾಡುತ್ತಿರುವವರನ್ನು ನಾವು ಮಾತನಾಡಿಸಿದರೆ ಅವರು ಮಾತನಾಡುತ್ತಾರೆ, ಅಥವಾ ಅಲೌಕಿಕ ಶಕ್ತಿಗಳಾದ ದೆವ್ವ ಭೂತ ಮುಂತಾದವುಗಳ ಪ್ರಭಾವಕ್ಕೆ ಒಳಗಾದಂತಹವರನ್ನೂ ಮಾತನಾಡಿಸಿದರೆ ಅವರು ಮಾತನಾಡುತ್ತಾರೆ. ಆದರೆ ಸಂಪತ್ತು ಎನ್ನುವ ಭೂತದ ಪ್ರಭಾವಕ್ಕೆ ಒಳಗಾದವರನ್ನು ಮಾತನಾಡಿಸಬಾರದು. ಏಕೆಂದರೆ ಅಧಿಕಾರ ಮತ್ತು ಸಂಪತ್ತು ವ್ಯಕ್ತಿಯ ನಡೆ-ನುಡಿಯನ್ನು ಬದಲಿಸಿ ಬಿಡುತ್ತದೆ. ಅವರು ಯಾವಾಗ ಸಮಾಜದೊಂದಿಗೆ ಬೆರೆಯುತ್ತಾರೆ ಎಂದರೆ ಅವರ ಬದುಕಿನಲ್ಲಿ ಬಡತನ ಎಂಬ ಮಂತ್ರ ಪ್ರವೇಶಿಸಿದಾಗ ಮಾತ್ರ ಎಂದು ಹೇಳುತ್ತಾ ಸಂಪತ್ತಿಗೆ ಒಳಗಾದ ಜನತೆ ಸಾಮಾನ್ಯ ನಡೆ-ನುಡಿಯನ್ನು ಬದಲಿಕೊಳ್ಳುತ್ತಾರೆ; ಅವರನ್ನು ಮತ್ತೆ ಸರಿದಾರಿಗೆ ತರುವಂತಹುದು ಬದುಕಿನಲ್ಲಿನ ಕಷ್ಟಗಳು ಎಂಬುದಾಗಿ ಮೇಲಿನ ವಚನದಲ್ಲಿ ವಿವರಿಸಲಾಗಿದೆ.

ವಚನ-5

ಲೋಕದ ಡೊಂಕ ನೀವೇಕೆ ತಿದ್ದುವಿರಿ?
ನಿಮ್ಮ ನಿಮ್ಮ ತನುವ ಸಂತೈಸಿಕೊಳ್ಳಿ
ನಿಮ್ಮ ನಿಮ್ಮ ಮನವ ಸಂತೈಸಿಕೊಳ್ಳಿ
ನೆರೆಮನೆಯ ದುಃಖಕ್ಕೆ ಅಳುವವರ ಮೆಚ್ಚ
ಕೂಡಲಸಂಗಮದೇವಾ

ಮೇಲಿನ ವಚನವು ಮೊದಲು ತಾನು ಸರಿ ಹೋಗಬೇಕು, ತನ್ನ ಲೋಪವನ್ನು ಸರಿಪಡಿಸಿಕೊಳ್ಳಬೇಕು ಎಂಬ ಹಿನ್ನಲೆಯನ್ನು ರಚಿತವಾಗಿದೆ. ಈ ಜಗತ್ತಿನಲ್ಲಿ ಹಲವಾರು ಸಮಸ್ಯೆಗಳಿವೆ ಅವುಗಳನೆಲ್ಲಾ ಸರಿಪಡಿಸುವ ಕಾರ್ಯಕ್ಕೆ ನೀವು ತೊಡಗಿಕೊಳ್ಳಬೇಡ. ಬದಲಿಗೆ ನಿನ್ನ ಭೌತಿಕ ದೇಹದ ಸಮಸ್ಯೆಗಳನ್ನು ಬಗೆಹರಿಸಿಕೊ; ಹಾಗೆಯೇ ನಿನ್ನ ಮನಸ್ಸಿನ ಕಲ್ಮಶಗಳನ್ನು ಹೋಗಲಾಡಿಸಿಕೊ ಏಕೆಂದರೆ ತನ್ನಲ್ಲಿಯೇ ಹಲವು ಸಮಸ್ಯೆಗಳನ್ನು ಇಟ್ಟುಕೊಂಡು, ತನ್ನ ಮತ, ಧರ್ಮ, ಜಾತಿಗಳಲ್ಲಿಯೇ ನೂರಾರು ಗೊಂದಲಗಳನ್ನು ಹೊಂದಿ, ಬೇರೆಯವರ ಜಾತಿ, ಮತ, ಧರ್ಮದ ತಪ್ಪುಗಳನ್ನು ಕುರಿತು ಮಾತನಾಡುವವರನ್ನು ಕೂಡಲ ಸಂಗಮದೇವ ಒಪ್ಪುವುದಿಲ್ಲ. ಹಾಗಾಗಿ ಮೊದಲು ತಾನು ಸರಿ ಹೋದರೆ ಜಗತ್ತು ಸರಿಯಾಗುತ್ತದೆ ಎಂಬ ವಿಚಾರವನ್ನು ಪ್ರಸ್ತುತಪಡಿಸುತ್ತಾ ಸ್ವವಿಮರ್ಶೆಯ ಹಿನ್ನೆಲೆಯಲ್ಲಿ ಜಗತ್ತಿನ ಏಳಿಗೆ ಸಾಧ್ಯ ಎಂಬುದನ್ನು ತಿಳಿಸಿದ್ದಾರೆ.

ವಚನ-6

ಮನೆಯೊಳಗೆ ಮನೆಯೊಡೆಯಿದ್ದಾನೋ ಇಲ್ಲವೋ?
ಹೊಸ್ತಿಲಲ್ಲಿ ಹುಲ್ಲು ತುಂಬಿ, ಮನೆಯೊಳಗೆ ರಜ ತುಂಬಿ
ಮನೆಯೊಳಗೆ ಮನೆಯೊಡೆಯನಿದ್ದಾನೊ ಇಲ್ಲವೋ?
ತನುವಿನೊಳಗೆ ಹುಸಿ ತುಂಬಿ, ಮನದೊಳಗೆ ವಿಷಯ ತುಂಬಿ
ಮನೆಯೊಳಗೆ ಮನೆಯೊಡೆಯನಿಲ್ಲ
ಕೂಡಲಸಂಗಮದೇವಾ

ಈ ಆರನೇ ವಚನವನ್ನು ಎರಡು ಅಂಶಗಳ ಹಿನ್ನಲೆಯಲ್ಲಿ ಅರ್ಥೈಸಿಕೊಳ್ಳಬಹುದು. ಮೇಲಿನ ವಚನದಲ್ಲಿ ಭೌತಿಕ ಮನೆ ಮತ್ತು ಮಾನವನ ಶರೀರ ಇವೆರಡನ್ನು ಸಮೀಕರಿಸಿ ಎರಡೂ ಅಂಶಗಳಲ್ಲಿ ಶುದ್ಧತೆ ಮುಖ್ಯ. ಆ ಶುದ್ಧತೆಗೆ ಮೂಲ ಆಧಾರ ಯಜಮಾನ ಎಂಬುದಾಗಿ ವಿವರಿಸಲಾಗಿದೆ. ಭೌತಿಕ ಮನೆಯ ಒಳಗೆ ಆ ಮನೆಯನ್ನು ಕಾಯುವ ಒಡೆಯ, ನಾಯಕ ಅಥವಾ ಮನೆಯ ಯಜಮಾನ ಇದ್ದಾನೋ? ಇಲ್ಲವೋ? ಏಕೆಂದರೆ ಆ ಮನೆಯನ್ನು ಪ್ರವೇಶ ಮಾಡುವ ಪ್ರವೇಶದ್ವಾರದಲ್ಲಿ ಅಂದರೆ ಹೊಸ್ತಿಲಿನ ಬಳಿ ಹುಲ್ಲು(ಕಲ್ಮಶ) ಬೆಳೆದಿದೆ. ಮುಂದುವರಿದು ಮನೆಯ ಒಳಗಡೆ ಧೂಳಿನಿಂದ ಆವೃತವಾಗಿದೆ. ಹಾಗಾಗಿ ಆ ಮನೆಯನ್ನು ಕಾಯುವು ಒಡೆಯ ಇದ್ದಾನೋ ಅಥವಾ ಇಲ್ಲವೋ? ಎಂಬ ಅನುಮಾನ ವ್ಯಕ್ತವಾಗುತ್ತಿದೆ. ಹಾಗಾಗಿ ಯಾವುದೇ ಮನೆಯಾಗಲಿ ಯಾರಾದರೂ ಒಬ್ಬರ ನಾಯಕತ್ವದಲ್ಲಿ ನಡೆಯಬೇಕು. ಇಲ್ಲವಾದರೆ ಆ ಮನೆಯ ಹೊರಾಂಗಣ ಮತ್ತು ಒಳಾಂಗಣ ಎರಡೂ ಅಶುದ್ಧವಾಗಿರುತ್ತದೆ ಎಂಬುದಾಗಿ ಅರ್ಥೈಸಬಹುದಾಗಿದೆ.

ಮತ್ತೊಂದು ದೃಷ್ಟಿಯಿಂದ ಗಮನಿಸಿದಾಗ ಮನುಷ್ಯನ ಶರೀರವೆಂಬ ಮನೆಯಲ್ಲಿ ಆ ದೈವದ ವಾಸ ಇಲ್ಲದಂತಹ ಸಂದರ್ಭದಲ್ಲಿ ಆ ಮನಸ್ಸಿನ ಒಳಗೆ ಸುಳ್ಳು, ಮೋಸ, ವಿಷಯಾಸಕ್ತಿಗಳು ಆಕ್ರಮಿಸುತ್ತವೆ. ಜೊತೆಗೆ ವಿಷಯಾಸಕ್ತಿಗಳು (ಭೋಗಾಸಕ್ತಿಗಳು) ತುಂಬಿಕೊಳ್ಳುತ್ತವೆ ಎಂದು ಹೇಳುತ್ತಾ ಇಲ್ಲಿ ಮನೆ ಮತ್ತು ಮನುಷ್ಯನ

ಮನಸ್ಸುಗಳನ್ನು ನಿಯಂತ್ರಿಸಲು ಯಾರಾದರೊಬ್ಬರ ಅಗತ್ಯತೆ ಇದೆ. ಅವುಗಳ ನಿಯಂತ್ರಣ ಸಾಧ್ಯವಾಗದಿದ್ದಾಗ ಅದು ಮನೆಯಾಗಲಿ ಅಥವಾ ಮನಸ್ಸಾಗಲೀ ಅಸ್ತವ್ಯಸ್ತಗೊಳ್ಳುತ್ತದೆ ಎಂಬುದನ್ನು ಈ ವಚನವು ವಿವರಿಸುತ್ತದೆ.

ವಚನ-7

ಕಳಬೇಡ, ಕೊಲಬೇಡ, ಹುಸಿಯ ನುಡಿಯಲುಬೇಡ
ಮುನಿಯಬೇಡ, ಅನ್ಯರಿಗೆ ಅಸಹ್ಯಪಡಬೇಡ
ತನ್ನ ಬಣ್ಣಿಸಬೇಡ, ಇದಿರ ಹಳಿಯಲು ಬೇಡ
ಇದೇ ಅಂತರಂಗ ಶುದ್ಧಿ, ಇದೇ ಬಹಿರಂಗ ಶುದ್ಧಿ
ಇದೇ ನಮ್ಮ ಕೂಡಲಸಂಗಮದೇವರನೊಲಿಸುವ ಪರಿ

ಏಳನೇ ವಚನವು ಮನುಷ್ಯ ಭೌತಿಕವಾಗಿ ಮತ್ತು ಆಂತರಿಕವಾಗಿ ಬಹಳ ಶುದ್ಧನಾಗಿರಬೇಕಾದರೆ ಆತ ಹೇಗಿರಬೇಕು ಎಂಬುದನ್ನು ವಿವರಿಸುತ್ತದೆ.

ಮನುಷ್ಯ ಕೂಡಲಸಂಗಮ ದೈವದ ಕೃಪೆಗೆ ಒಳಗಾಗಬೇಕಾದರೆ ಆತ ಆಂತರಿಕವಾಗಿ ಮತ್ತು ಭೌತಿಕವಾಗಿ ಶುದ್ಧನಾಗಿರಬೇಕು, ಒಳ್ಳೆಯನಾಗಿರಬೇಕು ಎಂದು ಹೇಳುತ್ತಾ ಉತ್ತಮ ವ್ಯಕ್ತಿತ್ವದ/ಒಬ್ಬ ನಿಜ ಭಕ್ತನ/ಶರಣನ ಗುಣಗಳನ್ನು ಕುರಿತು ವಿವರಿಸುತ್ತದೆ. ನಿಜ ಭಕ್ತನಾದವನು ಕಳ್ಳತನವನ್ನು ಮಾಡಬಾರದು, ಕೊಲೆಯನ್ನು ಮಾಡಬಾರದು, ಸುಳ್ಳನ್ನು ಮಾತನಾಡಬಾರದು, ಕೋಪಿಸಿಕೊಳ್ಳಬಾರದು, ಬೇರೆಯವರನ್ನು ನೋಡಿ ಅಸಹ್ಯ ಪಡಬಾರದು, ತನ್ನನ್ನು ತಾನು ಹೊಗಳಿಕೊಳ್ಳಬಾರದು, ಬೇರೆಯವರನ್ನು ಟೀಕಿಸಬಾರದು – ಈ ಬಗೆಯ ಗುಣಗಳೇ ಒಬ್ಬ ನಿಜ ಶರಣನ ಅಂತರಂಗ ಮತ್ತು ಬಹಿರಂಗದ ಶುದ್ಧತೆಯ ಲಕ್ಷಣಗಳಾಗಿವೆ. ಜೊತೆಗೆ ಆ ದೈವದ ಕೃಪೆಗೆ ಪಾತ್ರನಾಗುವ ದಾರಿಗಳಾಗಿವೆ ಎಂದು ವಿವರಿಸುತ್ತದೆ.

ವಚನ-8

ಸಾರ! ಸಜ್ಜನರ ಸಂಗವ ಮಾಡುವುದು
ದೂರ! ದುರ್ಜನರ ಸಂಗ ಬೇಡಯ್ಯಾ
ಆವ ಹಾವಾದರೇನು? ವಿಷವೊಂದೇ
ಅಂತವರ ಸಂಗ ಬೇಡವಯ್ಯಾ
ಅಂತರಂಗ ಶುದ್ಧವಿಲ್ಲದವರ ಸಂಗ
ಸಿಂಗಿ, ಕಾಳಕೂಟ ವಿಷವೋ, ಕೂಡಲಸಂಗಮದೇವಾ

ಸತ್ವ ಇರುವ ಸಜ್ಜನರು ಎಂದರೆ ಎಲ್ಲರಿಗೂ ಒಳಿತನ್ನು ಉಂಟುಮಾಡುವ ಜನರ ಜೊತೆಗೆ ಸ್ನೇಹವನ್ನು ಬೆಳೆಸಬೇಕು. ಕೆಟ್ಟಗುಣಗಳನ್ನು ಹೊಂದಿರುವವರನ್ನು ದೂರ ಇಡಬೇಕು ಅಥವಾ ದೂರ ಇರಬೇಕು. ಹಾವು ಯಾವುದಾದರೇನು? ಹಾವಿನಲ್ಲಿರುವ ವಿಷ ಒಂದೆ. ವಿಷದ ಫಲಿತ ಅಪಾಯ ಅಥವಾ ಸಾವು. ಹಾಗೆಯೇ ದುರ್ಜನರ ಸಹವಾಸ ಎಂದಾದರೂ ಅಪಾಯವೇ ಆಗಿದೆ. ಅದೇ ರೀತಿ ಅಂತರಂಗ ಶುದ್ಧ ಇಲ್ಲದವರ ಸಹವಾಸ ಅದು ಅತ್ಯಂತ ಕೆಟ್ಟ ಕಾಳಕೂಟ ಅಂದರೆ ಕಾಳಿಂಗ ಸರ್ಪವು ಹೇಗೆ ವಿಷದಿಂದ ಕೂಡಿರುತ್ತದೆಯೋ ಹಾಗೆ ದುರ್ಜನರ ಸಂಘ ವಿಷದಿಂದ ಕೂಡಿರುತ್ತದೆ ಎಂದು ಬಸವಣ್ಣನವರು ಹೇಳಿದ್ದಾರೆ.

ಹೀಗೆ ಬಸವಣ್ಣನವರ ವಚನಗಳು ಮನುಷ್ಯನ ಬದುಕಿನ ಉನ್ನತಿಗೆ ಅಗತ್ಯವಾದ ಸಲಹೆ ಸೂಚನೆಗಳನ್ನು ನೀಡುತ್ತವೆ. ವಚನಗಳು ಎಂದರೆ ಒಂದು ರೀತಿಯ ನೀತಿ ಮಾತುಗಳೇ ಆಗಿವೆ. ವಚನಗಳು ಭೂತ, ವರ್ತಮಾನ ಮತ್ತು ಭವಿಷ್ಯತ್ತಿನ ಸಂದರ್ಭಗಳನ್ನು ಸರಳ ಮಾತುಗಳಲ್ಲಿ ಗಂಭೀರ ವಿಚಾರವನ್ನು ವಿವರಿಸುವ ಪಾಠಗಳಾಗಿವೆ.

## ಪರಾಮರ್ಶನ ಗ್ರಂಥಗಳು


1. ಬಸವಣ್ಣನವರ ವಚನ ಸಂಪುಟ – ಸಮಗ್ರ ವಚನ ಸಂಪುಟ-1 (ಸಂ) ಡಾ. ಎಂ.ಎಂ ಕಲಬುರ್ಗಿ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, 2001
2. ವಿಮರ್ಶೆಯ ಪರಿಭಾಷೆ – ಓ.ಎಲ್ ನಾಗಭೂಷಣ ಸ್ವಾಮಿ, ಅಭಿನವ, ವಿಜಯನಗರ, ಬೆಂಗಳೂರು-40, 2013
3. ಕನ್ನಡ ಸಾಹಿತ್ಯ ಕೋಶ – (ಸಂ) ರಾಜಪ್ಪ ದಳವಾಯಿ, ದಳವಾಯಿ ಪ್ರಕಾಶನ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು-56, 2010
4. ಶತಮಾನದ ಸಾಹಿತ್ಯ ವಿಮರ್ಶೆ (ಸಂ) ಹೆಚ್.ಎಸ್. ರಾಘವೇಂದ್ರರಾವ್, ಕರ್ನಾಟಕ ಸಾಹಿತ್ಯ ಅಕಾಡೆಮಿ, ಕನ್ನಡ ಭವನ, ಬೆಂಗಳೂರು-02